# ಕರ್ನಾಟಕ ಸರ್ಕಾರ

ಸಂಖ್ಯೆ : ಗ್ರಾಅಪ 323 ಜಿಪಸ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:05.07.2013

## ಅಧಿಸೂಚನೆ

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) ಪ್ರಕರಣ 310 ಉಪಪ್ರಕರಣ (1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಕರ್ನಾಟಕ ಪಂಚಾಯತ್ ರಾಜ್ ( ಜಿಲ್ಲಾ ಯೋಜನಾ ಸಮಿತಿಯ ಸದಸ್ಯರುಗಳ ಚುನಾವಣೆ) ನಿಯಮಗಳು. 1996, ನಿಯಮ 3ರಲ್ಲಿ ಓದಿಕೊಂಡಂತೆ ಸರ್ಕಾರವು **ಬೆಂಗಳೂರು ಗ್ರಾಮಾಂತರ ಜಿಲ್ಲಾ ಯೋಜನಾ ಸಮಿತಿಯನ್ನು** ಅಧಿಸೂಚನೆ ಸಂಖ್ಯೆ: ಗ್ರಾಅಪ 266 ಜಿಪಸ 2006, ದಿನಾಂಕ:22.11.2008ರಂದು ರಚಿಸಿದ್ದು, ಸದರಿ ಸಮಿತಿಯನ್ನು ಪರಿಷ್ಕರಿಸಿ ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಂತೆ ಪುನರ್ ರಚಿಸಲಾಗಿದೆ.

| | | |
|---|---|---|
| ಅ. | ಇಡೀ ಜಿಲ್ಲೆಯನ್ನು ಅಥವಾ ಅದರ ಭಾಗವನ್ನು ಪ್ರತಿನಿಧಿಸುವ ಲೋಕಸಭೆಯ ಸದಸ್ಯರು | 1 |
| ಆ. | ಜಿಲ್ಲೆಯಲ್ಲಿನ ಮತದಾರನೆಂಬುದಾಗಿ ನೋಂದಾಯಿಸಿದ ರಾಜ್ಯ ಸಭೆಯ ಸದಸ್ಯರು | – |
| ಇ. | ಜಿಲ್ಲಾ ಪಂಚಾಯತಿ ಅಧ್ಯಕ್ಷ | 1 |
| ಈ. | ಜಿಲ್ಲೆಯ ವ್ಯಾಪ್ತಿಯ ನಗರಸಭೆಯ ಅಧ್ಯಕ್ಷ | 1 |
| ಉ. | ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿಯ ಸದಸ್ಯರುಗಳ ಚುನಾವಣೆ) ನಿಯಮಗಳು 1996ರನ್ವಯ<br>1. ಜಿಲ್ಲಾ ಪಂಚಾಯತ್ ಕ್ಷೇತ್ರವನ್ನು ಪ್ರತಿನಿಧಿಸುವ ಸದಸ್ಯರು<br>2. ಪುರಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಸದಸ್ಯರು | <br><br>09<br>03 |
| ಊ | ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ (310) ಉಪಪ್ರಕರಣ (3)ರಲ್ಲಿ ಗೊತ್ತುಪಡಿಸಿದ ಖಾಯಂ ಆಹ್ವಾನಿತರು | – |
| ಋ. | ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ (310) ಉಪಪ್ರಕರಣ (4)ರಲ್ಲಿ ಗೊತ್ತುಪಡಿಸಿದ ಸದಸ್ಯ ಕಾರ್ಯದರ್ಶಿ | – |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

5/7/13
( ಮಾರ್ಗರೇಟ್ ಲೀನಾ ನರೋನ್ಹ )
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ. ( ಸಂಬಂಧಪಟ್ಟ ಸದಸ್ಯರಿಗೆ ಅಧಿಸೂಚನೆಯ ಪ್ರತಿಯನ್ನು ನೀಡಲು ಸೂಚಿಸಿದೆ)
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.
4. ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ಬೆಂಗಳೂರು.
5. ಇಲಾಖಾ ವೆಬ್‌ಸೈಟ್ / ಕರ್ನಾಟಕ ವಿಕಾಸ ಮಾಸಪತ್ರಿಕೆ.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ